ಆ) ೧೯೭೭-೮೮ನೇ ಸಾಲಿನಲ್ಲಾದರೂ ವಿದ್ಯಾರ್ಥಿನಿಲಯವನ್ನು ತೆರೆಯುವ ಯೋಜನೆ ಸರ್ಕಾರ ದವರ ಪರಿಶೀಲನೆಯಲ್ಲಿದೆಯೆ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆ) ಹೌದು.

ಆ) ೧೯೮೭-೮೮ನೇ ಸಾಲಿನಲ್ಲಿ ಹಣದ ಸಾಧ್ಯತೆಯನ್ನು ನೋಡಿಕೊಂಡು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವನ್ನು ತೆರೆಯಲು ಪರಿಶೀಲಿಸಲಾಗುವುದು.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಡೂರು ತಾಲ್ಲೂಕು ದೊಡ್ಡದು ಇದೆ. ಇಲ್ಲಿ ೨೪ ಹೈಸ್ಕೂಲು ಹಾಗೂ ೪ ಕಾಲೇಜುಗಳು ಇದ್ದು, ಇಲ್ಲಿ ಶಾವು ಒಂದೂ ಹಾಸ್ಟೆಲನ್ನು ಪ್ರಾರಂಭ ಮಾಡಿಲ್ಲ. ೪ ಕಾಲೇಜುಗಳು ಇರತಕ್ಕ ಜಾಗದಲ್ಲಿ ಒಂದೂ ಹಾಸ್ಟೆಲು ಇಲ್ಲದೇ ಇರುವುದರಿಂದ ಕಾಲೇಜಿಗೆ ಬರುವ ಹುಡುಗರ ಸಂಖ್ಯೆ ಕಡಿಮೆಯಾಳುತ್ತಿದೆ. ೧೯೮೭-೮೮ನೇ ಸಾಲಿನಲ್ಲಾದರೂ ಈ ಅವಶ್ಯಕತೆಯನ್ನು ಈಡೇರಿಸುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಚಿಕ್ಕಮಗಳೂರು ಪ್ರಾಪರ್‌ನಲ್ಲಿ ಕಾಲೇಜು ಪ್ರಿನ್ಸಿಪಾಲರೇ ವಿದ್ಯಾರ್ಥಿಗಳ ಪತಿಯಿಂದ ಹಾಸ್ಟೆಲು ನಡೆಸುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಕಡೂರಿನ ಹಿರೇನೂರುವಿನಲ್ಲಿ ಕಳೆದ ಸಲ ಇದಕ್ಕೆ ಕಟ್ಟಡದ ಜಾಗವನ್ನು ನೋಡಿದ್ದು ವಿದ್ಯಾರ್ಥಿಗಳನ್ನು ಇಂಟರ್‌ವ್ಯೂ ಸಹಾ ಮಾಡಿದ್ದು ಆದನ್ನು ಅಲ್ಲಿಗೇ ನಿಲ್ಲಿಸಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಆದು ಪ್ರೀ-ಮೆಟ್ರಿಕ್‌ದು ಇರಬಹುದು. ಈಗ ಇರುವ ವಿಷಯ ಕಾಲೇಜ್ ಹಾಸ್ಟೆಲ್‌ನದು. ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.— ಎಂ. ಎಸ್. ಕೃಷ್ಣನ್ ಅವರ ಪ್ರಶ್ನೆ ಕ್ಯಾರೀಡ್ ಓವರ್ ಆಗಿದೆ.

ಚುಕ್ಕೆ ಪ್ರಶ್ನೆ ೧೦೦

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪ್ರಶ್ನೆ ಸ್ಟೈಫೆಂಡರಿ ಬಗ್ಗೆ ಇರುವುದರಿಂದ ಇದು ಡಿ.ಪಿ.ಎ.ಆರ್.ಗೆ ಬರುತ್ತದೆ. ಈ ವಿಷಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟದರಿಂದ ಮುಂದಿನ ಸಲ ತೆಗೆದುಕೊಳ್ಳೋಣ.

ಚುಕ್ಕೆ ಪ್ರಶ್ನೆ ೨೦೬

(ಸದಸ್ಯರು ಗೈರು ಹಾಜರಿ)

ಚುಕ್ಕೆ ಪ್ರಶ್ನೆ ೨೧೫

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪ್ರಶ್ನೆ ನಮಗೆ ಅನ್ ಸ್ಟಾರ್ಡ್ ಎಂದು ಬಂದುದರಿಂದ ಅದಕ್ಕೆ ಲಿಖಿತ ಮೂಲಕ ಉತ್ತರವನ್ನು ಕೊಡುತ್ತಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—ಹೀಗಾದರೆ ಹೇಗೆ ? ನಮಗೆ ಉತ್ತರ ಬೇಡವೇ ?

ಅಧ್ಯಕ್ಷರು.—ಮುಂದೆ ಕೊಡಲು ವ್ಯವಸ್ಥೆ ಮಾಡುತ್ತೇನೆ.

'ಸಿ, ಮತ್ತು 'ಡಿ' ಭೂಮಿಯ ಬಗ್ಗೆ

೧೧೧ (೨೪೮) ಶ್ರೀ ಐ. ಬಿ. ಶಂಕರ್. (ಚಿಕ್ಕ ಮಗಳೂರು).—ಮಾನ್ಯ ಕಂದಾಯ ಯೋಜನಾ ಹಾಗೂ ಕಾಯ್ದೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಆ) 'ಸಿ' ಮತ್ತು 'ಡಿ' ಜಮೀನಿನ ಬಗ್ಗೆ ವಿವಾದ ಇರುವುದು ಸರ್ಕಾರಕ್ಕೆ ತಿಳಿದಿದೆಯೇ ; ಇದರ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಇ) ಈ ಹಿಂಡ ಅರಣ್ಯ ಮಂತ್ರಿಗಳು ಹಾಗೂ ಕಂದಾಯ ಮಂತ್ರಿಗಳು ಸ್ಥಳಪರಿಶೀಲನೆ ಕ್ರಮ ಕೈಕೊಳ್ಳುವುದಾಗಿ ತಿಳಿಸಿದ್ದು ಇಲ್ಲಿಯವರೆಗೂ ಕ್ರಮ ಕೈಕೊಳ್ಳದಿರಲು ಕಾರಣವೇನು ?

ಇ) ತುಂಡು ಭೂಮಿಯ ಬಗ್ಗೆ ಸರ್ಕಾರ ಹೊಸ ಯೋಜನೆ ಮಾಡಿದೆಯೇ ; ಇದರಿಂದ ರೈತರಿಗೆ ಆಗುತ್ತಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) 'ಸಿ' ಜಮೀನಿನ ಬಗ್ಗೆ ವಿವಾದ ಇರುವ ಯಾವುದೇ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಉಪಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ತುಂಡು ಭೂಮಿಯ ಬಗ್ಗೆ ಸರ್ಕಾರ ಯಾವ ಹೊಸ ಯೋಜನೆ ಮಾಡಿಲ್ಲ.

ಅಧ್ಯಕ್ಷರೇ, ನಿರ್ದಿಷ್ಟವಾಗಿ ಸರ್ಕಾರಕ್ಕೆ ಲೇಕೀಮೂಲಕ ಅಥವಾ ಬೇರೆ ಮೂಲಕ ಏನೂ ಅರ್ಜಿ ಬಾರದೇ ಇದ್ದರೂ ನಾನು ಪ್ರವಾಸ ಹೋದಾಗ ಈ ಬಗ್ಗೆ ಶಾಸಕರು ಹೇಳಿದ್ದಾರೆ. ಮತ್ತು ಬೇರೆ ಬೇರೆಯವರೂ ಸಹಾ ತಿಳಿಸಿದ್ದಾರೆ. ಇಲ್ಲಿ ಸಿ ಅಂಡ್ ಡಿ ಲ್ಯಾಂಡ್ ಹಿಂದೆ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಆಗಿದೆ. ಇಂತಿಂಥಹವರು ಅದನ್ನು ಸಾಗು ಮಾಡುತ್ತಿದ್ದಾರೆಂದು ಸಹಾ ತಿಳಿಸಿದ್ದಾರೆ. ಈ ಬಗ್ಗೆ ಸೆಲೆಕ್ಟ್ ಕಮಿಟಿ ಮುಂದೆ ಇರುವ ಮಸೂದೆಯಲ್ಲಿ ಪರಿಶೀಲನೆ ಮಾಡುತ್ತೇವೆ. ಇದೂ ಕೂಡಾ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಐ. ಬಿ. ಶಂಕರ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಆದರೆ ಸಿ ಮತ್ತು ಡಿ ಜಮೀನು ಏನಿದೆ ಅದನ್ನು ಕಾನೂನು ಬದ್ಧವಾಗಿ ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿಲ್ಲ. ಬರೀ ಆಫೀಸಿನಲ್ಲಿ ಕುಳಿತು ಮಾಡಿದ್ದಾರೆ. ಹೆಚ್ಚು ಕಡಿಮೆ ೪೦-೫೦ ವರ್ಷಗಳಿಂದ ಇರುವ ಈ ಜನ ಹರಿಜನ ಕಾಲೋನಿಯಿಂದ ಹೊರಗಡೆ ಕಾಲು ಇಡಬೇಕಾದರೆ ಅರಣ್ಯ ಇಲಾಖೆಯವರನ್ನು ಸರಿಯಾದ ರೀತಿಯಲ್ಲಿ. ಕೇಳಬೇಕಾಗಿದೆ. ಅಷ್ಟು ಭಯ ಅವರಲ್ಲಿ ಇದೆ. ಈ ವಿಷಯವನ್ನು ಕೂಡಲೇ ಪರಿಶೀಲನೆ ಮಾಡುತ್ತೇನೆಂದು ಹೇಳಿರುವುದು ಬಹಳ ಸಂತೋಷ. ಕಂದಾಯ ಹಾಗೂ ಅರಣ್ಯ ಮಂತ್ರಿಗಳು ಒಟ್ಟಿಗೇ ಬಂದು ಪರಿಶೀಲನೆ ಮಾಡುತ್ತೇವೆಂದು ಹಿಂದೆ ಕೂಡಾ ಹೇಳಿದ್ದರು. ಈಗಲೂ ಅದೇ ಭರವಸೆಯನ್ನು ಕೊಟ್ಟಿದ್ದಾರೆ. ಇವತ್ತು ಅಲ್ಲಿ ಏನಾಗಿದೆ ಎಂದರೆ, ತುಂಡುಭೂಮಿ ಅಣ್ಣನ ಹೆಸರಿನಲ್ಲಿಜಮೀನು ಇದ್ದರೆ ಆತ ಸಾಲ ಮಾಡಿ ಹಿಸ್ಸೆ ಮಾಡಿಕೊಂಡಿರುತ್ತಾನೆ. ಹತ್ತಾರು ವರ್ಷಗಳ ಹಿಂದೆ ಇದು ಆಗಿದ್ದರೂ ಜಮೀನು ರಿಜಿಸ್ಟರ್ ಮಾಡುವುದಕ್ಕೆ ಆಗದೇ ಇರುವುದರಿಂದ ಅಣ್ಣ ಬ್ಯಾಂಕಿನಲ್ಲಿ ಸಾವಿರಾರು ರೂಪಾಯಿಗಳ ಸಾಲ ಮಾಡಿ ಕಟ್ಟದೆ ಹೋದರೆ ತಮ್ಮನ ಮನೆಯನ್ನೂ ಕೂಡಾ ಇವತ್ತು ಜಪ್ತಿ ಮಾಡುತ್ತಿದ್ದಾರೆ. ಇದನ್ನೆಲ್ಲಾ ನೋಡಿ, ಸರ್ಕಾರ ಸರಿಯಾದರೀತಿ ಆಲೋಚನೆ ಮಾಡಿ ಈ ತೊಂದರೆಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತುಂಡು ಭೂಮಿ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಿಯಾಯಿತಿ ಕೊಟ್ಟಿದ್ದೇವೆ. ಬೇರೆ ಕಡೆ ಇವರಿಗೆ ಭೂಮಿ ಕೂಡಾ ಕೊಡಬೇಕೆಂದು ಮತ್ತೊಂದು ಬೇಡಿಕೆ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಈ. ಸಿ. ಅಂಡ್ ಡಿ. ಲ್ಯಾಂಡನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡುವಾಗ ಆ ಸ್ಥಳದಲ್ಲಿ ಯಾರು ಇದ್ದರು ಎಂದು ನೋಡಿಲಿಲ್ಲ. ಈ ಭೂಮಿಯನ್ನು ಕೊಡುವುದರಿಂದ ಹತ್ತಾರು ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡಿಕೊಂಡಿರತಕ್ಕಂತ ಹಂಗಾಮಿ ಸಾಗುವಳಿದಾರರು ಏನಿದ್ದಾರೆ, ಅವರಿಗೆ ಅನ್ಯಾಯ ಮಾಡಿದಂತಾಗಲಿಲ್ಲವೇ ? ಇದರ ಬಗ್ಗೆ ಏನು ಯೋಚಿಸಿದ್ದೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅವರಿಗೆ ಅನ್ಯಾಯವಾಗಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಇದರಲ್ಲಿ ಕಾನೂನಿನ ತೊಡಕು ಇದೆ. ಒಂದು ಸಲ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಆದರೆ ಆ ಭೂಮಿಯನ್ನು ಪುನಃ ಪಡೆಯಬೇಕಾದರೆ ಕೇಂದ್ರಸರ್ಕಾರದ ಅಪ್ಪಣೆ ಬೇಕಾಗುತ್ತದೆ. ಈ ದೃಷ್ಟಿಯಿಂದ ನಾನು ಹೆಚ್ಚು ವಿವರಗಳನ್ನು ಇಲ್ಲಿ ಹೇಳುವುದು ಬೇಡ. ಇದನ್ನು ಯಾವ ರೀತಿ ಬಗೆಹರಿಸಬೇಕೆನ್ನುವುದು ಈಗ ಸೆಲೆಕ್ಟ್ ಕಮಿಟಿಯಮುಂದೆ ಇದ್ದು ಪರಿಶೀಲನೆ ಮಾಡಲಾಗುತ್ತಿದೆ.